## ರಹಸ್ಯ

ಒಂದು ದಿನ ರಾಜ ಮತ್ತು ಮಂತ್ರಿ ಮಾತನಾಡುತ್ತ ಕುಳಿತಿದ್ದರು. ಮಂತ್ರಿ ರಾಜನಿಗೆ ಹೇಳಿದ: 'ಪ್ರಭು ನೋಡಿ ಇವನು ನಮ್ಮ ಸೇನಾ ರಹಸ್ಯವನ್ನು ಹೊರಗಡೆ ಹೇಳಿ ಬಿಟ್ಟಿದ್ದಾನೆ. ಅದಕ್ಕೆ ಇವನನನ್ನು ಬಂಧಿಸಿದ್ದೇನೆ.' ರಾಜ ಹೇಳಿದ: 'ಹೌದೆ? ಆದ್ರೆ ನಮ್ಮ ಹತ್ತಿರ ಸೇನೆಯೇ ಇಲ್ಲವಲ್ಲ?' ಆಗ ಮಂತ್ರಿ, 'ಅದನ್ನೇ ಹೊರಗೆ ಹೇಳಿ ಬಿಟ್ಟಿದ್ದಾನೆ, ಮಹಾಪ್ರಭು!' ಎಂದಾಗ ರಾಜ ಮೌನಿಯಾದ.



**ನರಸಿಂಹ ಪೈ**



## ಮೂರ್ಖ ಯಾರು?

'ಸಿಸ್ಟರ್, ನಿನ್ನೆ ಆಪರೇಶನ್ ಮಾಡಿದೆನಲ್ಲ ಆ ಪೇಶಂಟ್ ಹೇಗಿದ್ದಾನೆ?' ವೈದ್ಯರು ಕೇಳಿದರು. 'ಪರವಾಗಿಲ್ಲ ಡಾಕ್ಟರ್, ಈಗ ಮಾತಾಡ್ತಿದಾನೆ' ಎಂದು ನರ್ಸ್ ಖುಷಿಯಿಂದ ಹೇಳಿದಳು.
'ಏನು ಮಾತಾಡಿದ?' ವೈದ್ಯರ ಪ್ರಶ್ನೆ.
'ಆಪರೇಶನ್ ಮಾಡಿದ ಮೂರ್ಖ ಯಾರು ಕರ್ಕೊಂಡ್ಬನ್ನಿ ಅಂದ' ಎಂದು ಅಮಾಯಕಳಂತೆ ನರ್ಸ್ ನುಡಿದಳು!

**ಪ್ರಕಾಶ ಎಸ್. ಮುನ್ನಂಗಿ**

ಚಿತ್ರಗಳು: ಗಣೇಶ ಆಚಾರ್ಯ